ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
KARNATAK UNIVERSITY DHARWAD
ಪರೀಕ್ಷಾ ವಿಭಾಗ
ಗೌಪ್ಯ ಶಾಖೆ, 2ನೇ ಮಹಡಿ, ಪರೀಕ್ಷಾ ಭವನ
EXAMINATION SECTION
Confidential Branch, 2nd Floor, Examination Bhavan

Azadi Ka Amrit Mahotsav

Website: www.kud.ac.in
e-mail: confidential@kud.ac.in
☎: (0836) 2215259

ನಂ.ಕವಿವಿ/ಪರೀಕ್ಷಾ-ಗೌಪ್ಯ/2023/ ದಿನಾಂಕ :

## ಸುತ್ತೋಲೆ

ಮಾನ್ಯ ಕುಲಪತಿಗಳ ಆದೇಶದ ಮೇರೆಗೆ, ದಿನಾಂಕ. **18.05.2023** ರಂದು ಬೆಳಗ್ಗೆ **11:00** ಗಂಟೆಯಿಂದ **01.00** **ಗಂಟೆಯವರೆಗೆ ಸಮಾಜ ವಿಜ್ಞಾನ, ವ್ಯವಹಾರ ಅಧ್ಯಯನ ಹಾಗೂ ಶಿಕ್ಷಣಶಾಸ್ತ್ರ ವಿಷಯಗಳ ಪರೀಕ್ಷೆಗಳು, ವಿಜ್ಞಾನ ವಿಷಯಗಳು ಮಧ್ಯಾಹ್ನ 2:00 ರಿಂದ 4:00 ರವರೆಗೆ ಹಾಗೂ ಕಲಾ, ವಾಣಿಜ್ಯಶಾಸ್ತ್ರ ಹಾಗೂ ಕಾನೂನು ವಿಷಯಗಳು ಮಧ್ಯಾಹ್ನ 2.00 ರಿಂದ 4:00 ರವರೆಗೆ ಪಿಎಚ್.ಡಿ. ಪ್ರವೇಶ ಪರೀಕ್ಷೆಗಳು (ಪಾರ್ಟ-'ಎ' ಮತ್ತು 'ಬಿ')** ಜರುಗಲಿದ್ದು, ಕೇಂದ್ರಿಕೃತವಾಗಿ ಅತ್ಯಂತ ಸುವ್ಯವಸ್ಥೆಯಲ್ಲಿ ಹಾಗೂ ಸುಗಮವಾಗಿ ಜರುಗಿಸುವ ನಿಟ್ಟಿನಲ್ಲಿ ಎಲ್ಲ ವಿಭಾಗಗಳ ಮುಖ್ಯಸ್ಥರು/ಸಂಯೋಜಕರು ಹಾಗೂ ಸಂಬಂಧಿಸಿದ ಸಿಬ್ಬಂದಿಗಳು ಈ ಕೆಳಗಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ.

1. ಮಾನ್ಯ ಕುಲಪತಿಗಳ ಆದೇಶದ ಮೇರೆಗೆ, **ಕಲಾ/ವಾಣಿಜ್ಯ ಹಾಗೂ ಕಾನೂನು ವಿಷಯಗಳಿಗೆ ಸಂಬಂಧಿಸಿದ ಪಿಎಚ್.ಡಿ. ಪ್ರವೇಶ ಪರೀಕ್ಷೆಗಳನ್ನು ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಪಿಎಚ್.ಡಿ. ಪ್ರವೇಶ ಪರೀಕ್ಷೆಗಳನ್ನು ಸೂಕ್ಷ್ಮ ಜೀವಶಾಸ್ತ್ರ ಮತ್ತು ಜೈವಿಕ ತಂತ್ರಜ್ಞಾನ ವಿಭಾಗ, ಹಾಗೂ ರಸಾಯನಶಾಸ್ತ್ರ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಹಾಗೂ ಸಮಾಜ ವಿಜ್ಞಾನ/ ವ್ಯವಹಾರ ಅಧ್ಯಯನ/ ಶಿಕ್ಷಣಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದಂತೆ ಪರೀಕ್ಷೆಗಳನ್ನು ವಿದ್ಯಾಸೌಧ ಕಟ್ಟಡ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ** ಜರುಗಿಸಲು ನಿರ್ಧರಿಸಲಾಗಿರುತ್ತದೆ.
2. ಕಾರಣ ಸಂಬಂಧಿಸಿದ ವಿಭಾಗಗಳ ಮುಖ್ಯಸ್ಥರು/ಸಂಯೋಜಕರು ತಮ್ಮ ತಮ್ಮ ವಿಭಾಗಗಳಲ್ಲಿ ಪಿಎಚ್.ಡಿ. ಪ್ರವೇಶ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಈ ಮಾಹಿತಿಯನ್ನು ತಿಳಿಸಿ, ಸದರ ವಿದ್ಯಾರ್ಥಿಗಳ ಹಾಜರಾತಿ ಸಂಖ್ಯೆಗಳನ್ನು ಎಂಟು ಸಂಖ್ಯೆಗಳ ಕ್ರಮಾಂಕಗಳಂತೆ ಅಂದರೆ 20230001, 20230002ರಂತೆ ನಮೂದಿಸಿ ಕುಲಸಚಿವರು (ಮೌಲ್ಯಮಾಪನ), ಸಿಸ್ಟಮ್ ಅನ್ಯಾಲಿಸ್ಟ್ ಗಣಕಯಂತ್ರ ವಿಭಾಗಕ್ಕೆ ತಪ್ಪದೇ ಸಲ್ಲಿಸಲು ಸೂಚಿಸಲಾಗಿದೆ.
3. **ಪಿಎಚ್.ಡಿ. ಪ್ರವೇಶ ಪರೀಕ್ಷೆಗೆ** ನೀಡಲಾಗುವ ಓ.ಎಂ.ಆರ್. ಉತ್ತರ ಪತ್ರಿಕೆಗಳಲ್ಲಿ ಕಪ್ಪು ಶಾಹಿ ಅಥವಾ ನೀಲಿ ಶಾಹಿ ಬಾಲ್ ಪೆನ್‌ಗಳಿಂದ ಮಾತ್ರ ಉತ್ತರವನ್ನು ನಮೂದಿಸಲು ಸೂಚಿಸಲಾಗಿದೆ.
4. ಪಿಎಚ್.ಡಿ. ಪ್ರವೇಶ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಸರಳ ಕ್ಯಾಲ್ಕುಲೇಟರ್‌ಗಳನ್ನು ಮಾತ್ರ ಬಳಸಬೇಕೆಂದು ಸೂಚಿಸಲಾಗಿದೆ.
5. **ಪಿಎಚ್.ಡಿ. ಪ್ರವೇಶ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಪಿಎಚ್.ಡಿ. ಪ್ರವೇಶ ಪರೀಕ್ಷೆ ಜರುಗುವ ದಿನಾಂಕದಂದು ಪರೀಕ್ಷೆ ಪ್ರಾರಂಭವಾಗುವ 30 ನಿಮಿಷಗಳ ಮುಂಚೆ ಸೂಚಿಸಿದ ಪರೀಕ್ಷಾ ಕೇಂದ್ರಗಳಲ್ಲಿ ಹಾಜರಿರಲು ಸೂಚಿಸಲಾಗಿದೆ.**
6. ದಿನಾಂಕ: **18.05.2023** ರಂದು ಜರುಗಲಿರುವ ಪಿಎಚ್.ಡಿ. ಪ್ರವೇಶ ಪರೀಕ್ಷೆಗಳು ಮುಕ್ತಾಯವಾಗುವವರೆಗೆ ಸಂಬಂಧಿಸಿದ ವಿಭಾಗಗಳ ಮುಖ್ಯಸ್ಥರು/ಸಂಯೋಜಕರು ಹಾಗೂ ಸಂಬಂಧಿಸಿದ ಪ್ರಾಧ್ಯಾಪಕರು ತಮ್ಮ ತಮ್ಮ ವಿಭಾಗಗಳಲ್ಲಿ ಹಾಜರಿರಲು ಸೂಚಿಸಲಾಗಿದೆ. ಕಾರಣ ಸಂಬಂಧಿಸಿದ ವಿಷಯಗಳ ಪ್ರಶ್ನೆ ಪತ್ರಿಕೆಗಳಲ್ಲಿ ವಿದ್ಯಾರ್ಥಿಗಳಿಗೆ ಏನಾದರು ಸಂದೇಹಗಳು ಉದ್ಭವಿಸಿದಲ್ಲಿ ತಮ್ಮನ್ನು ಸಂಪರ್ಕಿಸಿ ಮಾಹಿತಿ ಪಡೆಯಲು ವಿದ್ಯಾರ್ಥಿಗಳಿಗೆ ಸೂಚಿಸಲಾಗುವುದು.

ಪು.ತಿ.ನೋ.

7. ಮಾನ್ಯ ಕುಲಪತಿಗಳ ಆದೇಶದ ಮೇರೆಗೆ, ಪಿಎಚ್.ಡಿ. ಪ್ರವೇಶ ಪರೀಕ್ಷೆಗಳನ್ನು ಜರುಗಿಸಲು ಈ ಕೆಳಗಿನಂತೆ ಮುಖ್ಯ ಅಧೀಕ್ಷಕರನ್ನು ನೇಮಿಸಲಾಗಿದ್ದು, ಸದರ ಅಧೀಕ್ಷಕರು ಪರೀಕ್ಷೆಗಳನ್ನು ಸುವ್ಯಸ್ಥಿತವಾಗಿ ಹಾಗೂ ಕಟ್ಟುನಿಟ್ಟಾಗಿ ಜರುಗಿಸಲು ಅವಶ್ಯಕವಿರುವ ಸಿಬ್ಬಂದಿಗಳನ್ನು ನಿಯೋಜಿಸಿಕೊಂಡು ಪರೀಕ್ಷೆಗಳನ್ನು ಜರುಗಿಸಲು ಸೂಚಿಸಲಾಗಿದೆ. ಅಧೀಕ್ಷಕರಿಗೆ ಹಾಗೂ ನಿಯೋಜನೆಗೊಂಡ ಸಿಬ್ಬಂದಿಗಳಿಗೆ ವಿಶ್ವವಿದ್ಯಾಲಯದ ನಿಯಮಾನುಸಾರ ಭತ್ಯೆಗಳನ್ನು ಮಂಜೂರು ಮಾಡಲಾಗುವದು.

| Sl. No. | Chief Superintendent Address | Venue | Subjects |
|---|---|---|---|
| 1 | Dr.N.Y. Mattihal<br>Dr.R.C. Hiremath Kannada Studies Karnatak University, Dharwad<br>Cell No.9448545097 | Dr.R.C. Hiremath Kannada Studies Karnatak University, Dharwad | 1. **ARTS FACULTY**<br>2. **COMMERCE FACULTY**<br>3. **LAW FACULTY** |
| 2 | Dr. Vedamurthy A.B.<br>Dept. of Studies in Microbiology & Biotechnology, Karnatak University, Dharwad<br>Cell No.9341314101 | Dept. of Studies in Microbiology & Biotechnology, & Dept. of Studies in Chemistry Karnatak University, Dharwad | 1. **SCEINCE FACULTY** |
| 3 | Dr. Venumadhava G.S.<br>Dept. of Studies in Criminology & Forensic Science,<br>Karnatak University, Dharwad<br>Cell No. 9448442361 | Criminology & Forensic Science Depatment "Vidya Soudha Building", Karnatak University, Dharwad | 1. **SOCIAL SCIENCE FACULTY**<br>2. **MANAGEMENT FACULTY**<br>3. **EDUCATION FACULTY** |

ಕುಲಸಚಿವರು (ಮೌಲ್ಯಮಾಪನ)

ಗೆ,

1. ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು/ಸಂಯೋಜಕರಿಗೆ.
2. ಡಾ. ಎನ್.ವಾಯ್. ಮಟ್ಟಿಹಾಳ, ಪ್ರಾಧ್ಯಾಪಕರು, ಸ್ನಾತಕೋತ್ತರ ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ ಕ.ವಿ.ವಿ., ಧಾರವಾಡ.
3. ಡಾ. ವೇದಮೂರ್ತಿ ಎ.ಬಿ ಪ್ರಾಧ್ಯಾಪಕರು, ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ ಮತ್ತು ಜೈವಿಕ ತಂತ್ರಜ್ಞಾನ ವಿಭಾಗ ಕ.ವಿ.ವಿ., ಧಾರವಾಡ.
4. ಡಾ. ಜಿ.ಎಸ್. ವೇಣುಮಾಧವ ಪ್ರಾಧ್ಯಾಪಕರು, ಸ್ನಾತಕೋತ್ತರ ಅಪರಾಧಶಾಸ್ತ್ರ ಮತ್ತು ವಿಧಿವಿಜ್ಞಾನ ವಿಭಾಗ, ಕ.ವಿ.ವಿ., ಧಾರವಾಡ.

**ಪ್ರತಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:**

1. ವಿತ್ತಾಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ಉಪ ಕುಲಸಚಿವರು, ವಿದ್ಯಾಮಂಡಳ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3. ಉಪ ಕುಲಸಚಿವರು/ಸಹಾಯಕ ಕುಲಸಚಿವರು ಪರೀಕ್ಷಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4. ಸಿಸ್ಟಮ್ ಅನ್ಯಾಲಿಸ್ಟ್, ಗಣಕ ಕೇಂದ್ರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5. ಅಧೀಕ್ಷಕರು, ಪ್ರಶ್ನೆ ಪತ್ರಿಕೆ/ಸಾಮಾನ್ಯ ಆಡಳಿತ/ಸ್ನಾತಕೋತ್ತರ ಪರೀಕ್ಷಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
6. ಮಾನ್ಯ ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ) ಇವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ., ಧಾರವಾಡ.
7. ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ವಿಭಾಗ, ಕ.ವಿ.ವಿ., ಧಾರವಾಡ.